# 9ನೇ ತರಗತಿ ಮಾದರಿ ಪ್ರಶ್ನೆಪತ್ರಿಕೆ ಪ್ರಥಮ ಸಂಕಲನಾತ್ಮಕ ಪರೀಕ್ಷೆ ಅಂಕ: 90

ವಿಷಯ:- ಪ್ರಥಮ ಭಾಷೆ ಕನ್ನಡ. ಅವಧಿ: 3 ಗಂ

I. ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಕ್ರಮಾಕ್ಷರ ಸಹಿತ ಸರಿ ಉತ್ತರ ಆರಿಸಿ ಬರೆಯಿರಿ. 5×1=5

1. ಹೆಮ್ಮರ ಪದದ ಸಮಾಸದ ಹೆಸರು ಇದಾಗಿದೆ;
   [ಎ] ತತ್ಪುರುಷ [ಬಿ] ಕರ್ಮಧಾರೆಯ [ಸಿ ] ಬಹುವ್ರೀಹಿ [ಡಿ] ದ್ವಿಗು
2. ಸೂರ್ಯೋದಯ ಪದದ ಸಂಧಿ ಹೆಸರು ಇದು;
   [ಎ] ಸವರ್ಣದೀರ್ಘ ಸಂಧಿ [ಬಿ] ವೃದ್ಧಿ ಸಂಧಿ [ಸಿ ] ಗುಣ ಸಂಧಿ [ಡಿ] ಯಣ್ ಸಂಧಿ
3. ಬಣ್ಣ ಬಣ್ಣ ಪದದ ವ್ಯಾಕರಣಾಂಶ ಇದು;
   [ಎ]ಜೋಡುನುಡಿ [ಬಿ] ಅವ್ಯಯ [ಸಿ ] ಕ್ರಿಯಾಪದ [ಡಿ] ದ್ವಿರುಕ್ತಿ
4. ಚತುರ್ಥಿ ವಿಭಕ್ತಿಯ ಕಾರಕಾರ್ಥ ಇದಾಗಿದೆ;
   [ಎ] ಸಂಪ್ರದಾನ [ಬಿ] ಅಪಾದಾನ [ಸಿ ] ಕರಣ [ಡಿ] ಅಧಿಕರಣ
5. ಛಂದಸ್ಸಿನಲ್ಲಿ ಲಘು ಗುರ್ತಿಸುವ ಸಂಕೇತ ಇದು;
   [ಎ] ₹ [ಬಿ] U [ಸಿ ] – [ಡಿ] †

II. ಈ ಮೊದಲೆರಡು ಪದಗಳಂತೆ ಮೂರನೇ ಪದದ ಸಂಬಂಧ ಕಲ್ಪಿಸಿ, ನಾಲ್ಕನೇ ಪದ ಬರೆಯಿರಿ. 4×1=4

6. ವರುಷ ; ವರ್ಷ : ; ಬಿನ್ನಹ ; -----------------
7. ಬಾನು ; ಆಕಾಶ : ; ಭಾನು ; -----------------
8. ಷಟ್ಪದಿ ; ಆರುಸಾಲು : ; ಕಂದಪದ್ಯ ; -----------------
9. ಚಿತ್+ ಆನಂದ ; ಚಿದಾನಂದ : ; ವಾಕ್ + ದೇವಿ ; -----------------

III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪೂರ್ಣವಾಕ್ಯದಲ್ಲಿ ಉತ್ತರಿಸಿರಿ. 5×1=5

10. ಕನ್ನಡದ ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ ಯಾವುದು ?
11. ಜಯಪುರದ ಪೂರ್ವದ ರಾಜಧಾನಿ ಯಾವುದು?
12. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತಿದೆ ?
13. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?
14. ಭರತ ಚಕ್ರವರ್ತಿಯು ಆಳುತ್ತಿದ್ದ ನಾಡು ಯಾವುದು?

IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. 9×2=18

15. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು?
16. ಧರ್ಮಸಮದೃಷ್ಟಿ ಪಾಠದಲ್ಲಿ ರಾಮಾನುಜಾಚಾರ್ಯರ ಗುಣಗಳನ್ನು ಹೇಗೆ ವರ್ಣಿಸಲಾಗಿದೆ? .
17. ರಾಧಾಕೃಷ್ಣನ್ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಯಾವುವು?
18. ಪಾರಿವಾಳಗಳ ಆನಂದಕ್ಕೆ ಕಾರಣವೇನು?
19. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು?
20. ಗುಣಸಾಗರಿ ಪಂಡರಿಬಾಯಿ ಅವರು ಪಡೆದ ಪ್ರಶಸ್ತಿಗಳು ಯಾವುವು?
21. ಪಂಡರೀಬಾಯಿಯವರು ನಾಟಕದಲ್ಲಿ ಬಣ್ಣಹಚ್ಚಲು ಕಾರಣವೇನು?
22. ಬಸವ ಕೇಂದ್ರದವರು ನಾಗರ ಪಂಚಮಿಯ ದಿನ ಮೈಕಿನಲ್ಲಿ ಏನೆಂದು ಹೇಳಿ ಜಾಗೃತಿ ಮೂಡಿಸುತ್ತಿದ್ದರು?
23. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳಾವುವು?

V. ಈ ಕೆಳಗಿನ ಕವಿ/ಲೇಖಕರ ಕಾಲ, ಜನ್ಮಸ್ಥಳ, ಕೃತಿ, ಪ್ರಶಸ್ತಿ/ಬಿರುದುಗಳನ್ನು ವಾಕ್ಯ. ರೂಪದಲ್ಲಿ ಬರೆಯಿರಿ. 2×3=6

24. ಶಿವರಾಮ ಕಾರಂತ
25. ಜನ್ನ.

VI. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ , ಗಣ ವಿಂಗಡಿಸಿ, ಛಂದಸ್ಸಿನ ಹೆಸರು ತಿಳಿಸಿ. 1× 3=3

26. ತಡವಾದಪ್ಪುದು ಪೌರರ್

ಕುಡುವೇೞ್ಪುದು ಹಲವು ಜೀವರಾಶಿಯ ಬಲಿಯಂ ||

VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1× 3=3

27. "ಕನ್ನಡ ಮೌಲ್ವಿಯ ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ದಿ ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು".

VIII. ಈ ಕೆಳಗಿನ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1×3=3

28. ತುಂಬಿದ ಕೊಡ ತುಳುಕುವುದಿಲ್ಲ. **ಅಥವಾ** ★ ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು?

IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗೆ ಸಂದರ್ಭ- ಸ್ವಾರಸ್ಯಗಳನ್ನು ಬರೆಯಿರಿ. 5×3=15

29. "ನಾನು ಕಲಿತಿದ್ದು ಉರ್ದು, ಕಲಿಸಿದ್ದು ಕನ್ನಡ".

30. " ಅಲ್ಲಿ ಮಧ್ಯಾಹ್ನ ವೇಳೆ ಸ್ನಾನಕ್ಕೆ ನೀರು ಕಾಯಿಸುವ ಅಗತ್ಯವಿಲ್ಲ".

31. " ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀಱಿದವನು ರಾಜದ್ರೋಹಿಯಪ್ಪನು".

32. " ಜಡನಿದ್ರೆ ಸಿಡಿದೆದ್ದ ವೀರಾಟ್ಟಹಸದಲಿ ಬಾನು ಬುವಿ ಬೆಳಗಬೇಕು".

33. " ಮೋಹ ಮುಸುಕಿದ ಬುದ್ಧಿ , ಸರ್ವನಾಶದ ಸಿದ್ಧಿ "

X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. [ಪೂರ್ಣ ನಾಲ್ಕು ಸಾಲುಗಳು] 1×4=4

34. ನವಭಾವ................................ ಅಥವಾ ಜಾತಿ-ಕುಲ ..................................

........................ಧ್ವನಿಯೇರಬೇಕು. . ...............................ಗುಡುಗಬೇಕು.

XI. ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1×4=4

35. ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್ |
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇಱೆ ಕೋಡೆರಡೊಳವೇ ||

XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2×4=8

36. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

ಅಥವಾ

ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

37. ಭರತ ಚಕ್ರವರ್ತಿಯ ರಾಜದರ್ಬಾರಿನ ವೈಭವವನ್ನು ವಿವರಿಸಿ.

ಅಥವಾ

ಸಿರಿಯನಿನ್ನೇನ ಬಣ್ಣಿಪೆನು ಪದ್ಯದಲ್ಲಿ ಭರತ ಚಕ್ರವರ್ತಿಯನ್ನು ಹೇಗೆ ವರ್ಣಿಸಲಾಗಿದೆ? ವಿವರಿಸಿ .

XIII. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1×4=4(2+2)

38. ಸ್ವಾಮಿ ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದ ವಿರೋಧಿಯಾಗಿದ್ದರೆಂದುಗಿದ ತಿಳಿದುಬರುತ್ತದೆ. ಏಕ ಧರ್ಮ ಮತ್ತು ಏಕ ಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದು ನಂಬುತ್ತಾ ನಂಬಿಸುತ್ತ ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು. ಕುವೆಂಪು ಹೇಳುವಂತೆ ಅವರು ಮಾನವತಾಮಿತ್ರರಾಗಿದ್ದರು. "ಮನುಷ್ಯತ್ವದ ಮಹಿಮೆಯನ್ನು ಎಂದಿಗೂ ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹಿಂದೆ ಇರಲಿಲ್ಲ , ಮುಂದೆ ಬರುವುದಿಲ್ಲ. ಕ್ರೈಸ್ತ , ಬುದ್ಧ , ಕೃಷ್ಣ , ರಾಮ ರೆಲ್ಲ ಅಹಮಸ್ಮಿ ಎಂಬ ಮಹಾ ವಾರಿಧಿಯ ತರಂಗಗಳು ಮಾತ್ರ" ಎಂದು ಘೋಷಿಸಿದರು.

ವಿವೇಕಾನಂದರ ಧೀರೋದಾತ್ತ ನಿಲುವುಗಳು ವೈಯಕ್ತಿಕ ಮಾತ್ರವಾಗದೆ ಸಾಮಾಜಿಕವಾಗಿ ರೂಪಾಂತರಗೊಂಡು ಗಟ್ಟಿಯಾದದ್ದೇ ಅವರ ವ್ಯಕ್ತಿತ್ವದ ವಿಶೇಷ; ಅವರದು ಪ್ರಖರ ಸಾಮಾಜಿಕ ವ್ಯಕ್ತಿತ್ವ, ದೀನದಲಿತರ ಉದ್ಧಾರವೇ ಅವರ ಧರ್ಮದ ಮೊದಲ ತತ್ವ. ಅದೇ ಅವರ ವೈಚಾರಿಕ ಸತ್ವ. ಆದ್ದರಿಂದ ವಿವೇಕಾನಂದರು ಇಂದಿಗೂ ಸತ್ಯ.

ಪ್ರಶ್ನೆಗಳು;

38. [ಎ] ವಿವೇಕಾನಂದರು ಕೋಮುವಾದದ ಕಟ್ಟ ವಿರೋಧಿಯಾಗಿದ್ದರು, ಏಕೆ?
38. [ಬಿ] "ವಿವೇಕಾನಂದರು ಇಂದಿಗೂ ಸತ್ಯ" ಏಕೆ ? ತಿಳಿಸಿ.

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1×4=4

39. ನೀವು ಲೇಖನ / ಲಿಖಿತ್ , 10ನೇ ತರಗತಿ, ಕುವೆಂಪು ಪ್ರೌಢಶಾಲೆ, ಕುವೆಂಪು ನಗರ, ದಾವಣಗೆರೆ ಎಂದು ಭಾವಿಸಿ , ನಿಮ್ಮ ಶಾಲೆಯಲ್ಲಿ ಉದ್ಯಾನವನ ನಿರ್ಮಿಸಲು ಬೇಕಾಗುವ ಅಲಂಕಾರಿಕ ಗಿಡಗಳನ್ನು ಉಚಿತವಾಗಿ ನೀಡುವಂತೆ ಕೋರಿ ನಿಮ್ಮ ನಗರದಲ್ಲಿರುವ ತೋಟಗಾರಿಕೆ ಇಲಾಖೆ ನಿರ್ದೇಶಕರಿಗೆ ಒಂದು ಮನವಿ ಪತ್ರ ಬರೆಯಿರಿ .

**ಅಥವಾ**

★ ನೀವು ಅಯನ / ಆಯಷ್ , 9 ನೇ ತರಗತಿ, ನವೋದಯ ಪ್ರೌಢಶಾಲೆ, ಶಾಂತಿಸಾಗರ ಎಂದು ಭಾವಿಸಿ, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಪರಿಶೀಲಿಸಲು ಶಾಲೆಯಲ್ಲಿ ನಡೆಯಲಿರುವ ಪೋಷಕರ ಸಭೆಗೆ ಹಾಜರಾಗುವಂತೆ ತಿಳಿಸಿ ದಾವಣಗೆರೆಯ ಜಯನಗರದಲ್ಲಿ ವಾಸವಾಗಿರುವ ನಿಮ್ಮ ತಾಯಿಗೊಂದು ವೈಯಕ್ತಿಕ ಪತ್ರ ಬರೆಯಿರಿ.

XV. ಈ ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ. 1×4=4

40. ನೆರೆಹಾವಳಿಯಿಂದಾಗುವ ಅನನುಕೂಲಗಳು ಹಾಗೂ ತಡೆಗಟ್ಟುವ ಕ್ರಮಗಳು.

**ಅಥವಾ**

ವಿದ್ಯಾರ್ಥಿಗಳಲ್ಲಿ ಅತಿಯಾದ ಮೊಬೈಲ್ ದುರ್ಬಳಕೆಯಿಂದಾಗುವ ತೊಂದರೆಗಳು ಮತ್ತು ಪರಿಹಾರಗಳು.